# ಎಫ್‌ಬಿ: 'ಡೇಟಾ ವರ್ಗಾವಣೆ' ಫೀಚರ್!

■ **ಶಶಿಕುಮಾರ್ ಸಿ.**

ಫೇಸ್‌ಬುಕ್‌ನಿಂದ ದೂರ ಉಳಿಯಬಯಸುವ ಕೆಲವರು ತಮ್ಮ ಖಾತೆಯಲ್ಲಿನ ಮಹತ್ವದ ಮಾಹಿತಿ ನಶಿಸಿಹೋಗುತ್ತದೆ ಎಂಬ ಕಾರಣಕ್ಕೆ ಆ ಯೋಚನೆಯಿಂದ ದೂರ ಉಳಿಯುತ್ತಾರೆ. ಇನ್ನೂ ಕೆಲವರು ಫೇಸ್‌ಬುಕ್‌ನಲ್ಲಿನ ತಮ್ಮ ಮಾಹಿತಿಯನ್ನು ಬೇರೆಡೆ ಸಂಗ್ರಹಿಸಲು ಸಾಧ್ಯವಾಗದೇ ಖಾತೆಯನ್ನು ಡಿಲೀಟ್ ಮಾಡಲಾಗದೇ ಇಕ್ಕಟ್ಟಿಗೆ ಸಿಲುಕಿರುತ್ತಾರೆ. ಇದಕ್ಕೆ ಪರಿಹಾರವಾಗಿ ಫೇಸ್‌ಬುಕ್ 'ಟ್ರಾನ್ಸ್‌ಫರ್ ಯುವರ್ ಇನ್‌ಫಾರ್ಮೇಷನ್' (Transfer Your Information) ಎಂಬ ಹೊಸ ಫೀಚರ್ ಅನ್ನು ತನ್ನ ಗ್ರಾಹಕರಿಗೆ ಪರಿಚಯಿಸಿದೆ.




'ಟ್ರಾನ್ಸ್‌ಫರ್ ಯುವರ್ ಇನ್‌ಫಾರ್ಮೇಷನ್' ಎಂಬುದು ಥರ್ಡ್ ಪಾರ್ಟಿ ಪ್ಲಾಟ್‌ಫಾರ್ಮಿಗೆ ಡೇಟಾವನ್ನು (ಮಾಹಿತಿ) ವರ್ಗಾಯಿಸಲು ಫೇಸ್‌ಬುಕ್ ಅಭಿವೃದ್ಧಿಪಡಿಸಿರುವ ವಿಶೇಷವಾದ ಫೀಚರ್. ಇದನ್ನು ಬಳಸಿಕೊಂಡು ಫೇಸ್‌ಬುಕ್ ಬಳಕೆದಾರರು ತಮ್ಮ ಖಾತೆಯಲ್ಲಿ ಮಾಹಿತಿಯನ್ನು 'ಗೂಗಲ್ ಡಾಕ್ಸ್' ಅಥವಾ ಬ್ಲಾಗರ್ – 'ವರ್ಡ್‌ಪ್ರೆಸ್' ಬ್ಲಾಗ್‌ಗಳಲ್ಲಿ ಬ್ಯಾಕ್ ಅಪ್ ರೂಪದಲ್ಲಿ ಸೇವ್ ಮಾಡಿಟ್ಟುಕೊಳ್ಳಬಹುದು.

ಫೇಸ್‌ಬುಕ್ ಬಳಕೆದಾರರು ತಮ್ಮ ಖಾತೆಯಲ್ಲಿನ ಮಾಹಿತಿಯನ್ನು ಥರ್ಡ್ ಪಾರ್ಟಿ ಪ್ಲಾಟ್‌ಫಾರ್ಮ್‌ಗೆ ವರ್ಗಾಯಿಸಲು ಅನುಕೂಲವಾಗುವಂತೆ ಕಂಪನಿ ಹಲವಾರು ಸುಧಾರಣೆಗಳನ್ನು ತರುತ್ತಿದೆ. ಫೇಸ್‌ಬುಕ್ ಪೋಸ್ಟ್ ಮಾತ್ರವಲ್ಲದೆ ಬಳಕೆದಾರರು ಫೇಸ್‌ಬುಕ್‌ನಲ್ಲಿ ಸೇವ್ ಮಾಡಿಟ್ಟುಕೊಂಡ ನೋಟ್ಸ್‌ಗಳನ್ನೂ ಸಹ ವರ್ಗಾವಣೆ ಮಾಡಬಹುದು.

ಹಿಂದೆ ಫೇಸ್‌ಬುಕ್‌ನಲ್ಲಿ 'ಡೇಟಾ ಪೋರ್ಟಬಲಿಟಿ' (Data Portability) ಎಂಬ ಟೂಲ್ ಇತ್ತು. 'ಡೇಟಾ ಪೋರ್ಟಬಲಿಟಿ' ಟೂಲ್ ಬಳಸಿ 'ಡ್ರಾಪ್‌ಬಾಕ್ಸ್' (Dropbox) ಮತ್ತು 'ಗೂಗಲ್ ಫೋಟೊಸ್' (Google Photos) ಅಪ್ಲಿಕೇಶನ್ನುಗಳಿಗೆ ಫೇಸ್‌ಬುಕ್ ಮಾಹಿತಿಯನ್ನು ವರ್ಗಾವಣೆ ಮಾಡಬಹುದಿತ್ತು. ಆದರೆ, ಆ ಆಯ್ಕೆಯು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಬಳಕೆದಾರರಿಗೂ ಆ ಬಗ್ಗೆ ಅಷ್ಟಾಗಿ ಮಾಹಿತಿ ಇರಲಿಲ್ಲ. ಇದೇ ಆಯ್ಕೆಯನ್ನು ಫೇಸ್‌ಬುಕ್ ಈಗ 'ಟ್ರಾನ್ಸ್‌ಫರ್ ಯುವರ್ ಇನ್‌ಫಾರ್ಮೇಷನ್' ಎಂಬ ಫೀಚರ್ ಆಗಿ ಅಭಿವೃದ್ಧಿಪಡಿಸಿ, ಅದರಲ್ಲಿ ಹೊಸ ಹೊಸ ಅಂಶಗಳನ್ನು ಸೇರಿದೆ.

ಫೇಸ್‌ಬುಕ್ ಬಳಕೆಯನ್ನು ಶಾಶ್ವತವಾಗಿ ನಿಲ್ಲಿಸುವ ಆಲೋಚನೆ ಯಾರಿಗಾದರೂ ಇದ್ದರೆ, ಅವರಿಗೆ 'ಟ್ರಾನ್ಸ್‌ಫರ್ ಯುವರ್ ಇನ್‌ಫಾರ್ಮೇಷನ್' ಟೂಲ್ ತುಂಬಾ ಉಪಯುಕ್ತವಾಗಲಿದೆ. ಇದನ್ನು ಬಳಸಿ ಫೇಸ್‌ಬುಕ್‌ನಲ್ಲಿರುವ ತಮ್ಮ ಫೋಟೊಗಳು, ಪೋಸ್ಟ್‌ಗಳು ಮತ್ತು ಕಂಟೆಂಟ್ ಅನ್ನು ಬೇರೆಡೆ ಸುರಕ್ಷಿತವಾಗಿ ಬ್ಯಾಕಪ್ ಮಾಡಿ ಫೇಸ್‌ಬುಕ್‌ಗೆ ಗುಡ್‌ಬೈ ಹೇಳಬಹುದು.

ಗುಡ್‌ಬೈ ಹೇಳಬಯಸುವವರಿಗೆ ಇಂತಹ ಫೀಚರ್ ಅನ್ನು ಸ್ವತಃ ಫೇಸ್‌ಬುಕ್ ಯಾಕೆ ಅಭಿವೃದ್ಧಿಪಡಿಸಿದೆ ಎಂಬ ಪ್ರಶ್ನೆ ಇಲ್ಲಿ ಕಾಡುವುದುಂಟು. ಖಾತೆಯಲ್ಲಿನ ಗ್ರಾಹಕರ ಮಾಹಿತಿಯ ಬ್ಯಾಕಪ್‌ಗೆ ಎಲ್ಲ ರೀತಿಯ ಸುರಕ್ಷಿತ ಕ್ರಮ ಕೈಗೊಳ್ಳುವುದರಿಂದ ಕೆಲವೊಂದಿಷ್ಟು ಗ್ರಾಹಕರನ್ನಾದರೂ ಉಳಿಸಿಕೊಳ್ಳುವ ಉದ್ದೇಶ ಅದರದ್ದು ಎನ್ನಲಾಗಿದೆ.

### ಮಾಹಿತಿ ವರ್ಗಾಯಿಸುವ ವಿಧಾನ

- ಫೇಸ್‌ಬುಕ್ ಖಾತೆಗೆ ಲಾಗಿನ್ ಆಗಬೇಕು. ನಂತರ 'ಸೆಟ್ಟಿಂಗ್ಸ್' ಆಯ್ಕೆಗೆ ತೆರಳಿ ಅದರೊಳಗೆ ಕಾಣುವ 'ಸೆಟ್ಟಿಂಗ್ಸ್ ಆ್ಯಂಡ್ ಪ್ರೈವೈಸಿ ಆಪ್ಷನ್' ಕ್ಲಿಕ್ಕಿಸಬೇಕು.
- ನಂತರ ಮತ್ತೊಮ್ಮೆ ಕಾಣುವ 'ಸೆಟ್ಟಿಂಗ್ಸ್' ಆಯ್ಕೆಯನ್ನು ಒತ್ತಿದರೆ ಕಾಣಿಸುವ, 'ಟ್ರಾನ್ಸ್‌ಫರ್ ಎ ಕಾಪಿ ಆಫ್ ಯುವರ್ ಇನ್‌ಫಾರ್ಮೇಷನ್' ಎಂಬ ಆಯ್ಕೆಯನ್ನು ಕ್ಲಿಕ್ಕಿಸಬೇಕು.
- ನಂತರ ಲಾಗಿನ್ ಪಾಸ್‌ವರ್ಡ್ ಅನ್ನು ಫೇಸ್‌ಬುಕ್ ಕೇಳುತ್ತದೆ. ಅದನ್ನು ನಮೂದಿಸಿ ಲಾಗಿನ್ ಆಗಬೇಕು.
- ಬಳಿಕ ಬ್ಯಾಕಪ್ ಮಾಡಬೇಕಾದ ಮಾಹಿತಿಯನ್ನು ಒಂದೊಂದಾಗಿಯೇ ಸೆಲೆಕ್ಟ್ ಮಾಡಿಕೊಳ್ಳಬೇಕು.
- ಡ್ರಾಪ್ ಡೌನ್ ಲಿಸ್ಟಿನಿಂದ 'ಡೆಸ್ಟಿನೇಷನ್' (Destination) ಅಂದರೆ ಎಲ್ಲಿಗೆ ಪೋಸ್ಟ್ ವರ್ಗಾಯಿಸಬೇಕೆಂಬುದನ್ನು ಆಯ್ಕೆ ಮಾಡಬೇಕು.
- ನಂತರ 'ನೆಕ್ಸ್ಟ್' ಬಟನ್ ಕ್ಲಿಕ್ ಮಾಡಬೇಕು.
- ಈಗ ಫೇಸ್‌ಬುಕ್ ದೃಢೀಕರಣ ಪ್ರಕ್ರಿಯೆಯನ್ನು ಆರಂಭಿಸುತ್ತದೆ. ಒಂದೊಮ್ಮೆ ನೀವು ಗೂಗಲ್ ಡಾಕ್ಸ್‌ಗೆ ಪೋಸ್ಟ್ ಸೇವ್ ಮಾಡುವ ಆಪ್ಷನ್ ಆಯ್ಕೆ ಮಾಡಿದ್ದರೆ, ನಿಮ್ಮ ಗೂಗಲ್ ಅಕೌಂಟಿಗೆ ಸೈನ್ ಇನ್ ಮಾಡಬೇಕಾಗುತ್ತದೆ.
- ಈಗ ಎಲ್ಲಿಗೆ ಕಂಟೆಂಟ್ ವರ್ಗಾಯಿಸಬೇಕಿದೆಯೋ ಆ ಪ್ಲಾಟ್‌ಫಾರ್ಮಿನಲ್ಲಿ ಕಂಟೆಂಟ್ ಅನ್ನು ಎಡಿಟ್, ಕ್ರಿಯೇಟ್ ಮತ್ತು ಡಿಲೀಟ್ ಮಾಡಲು ಫೇಸ್‌ಬುಕ್‌ಗೆ ಅನುಮತಿ ನೀಡಬೇಕಾಗುತ್ತದೆ. ಗೂಗಲ್ ಡಾಕ್ಸ್‌ಗೆ ಕಂಟೆಂಟ್ ವರ್ಗಾಯಿಸಬೇಕಾದರೆ ಫೇಸ್‌ಬುಕ್‌ಗೆ ಈ ಅನುಮತಿ ಅಗತ್ಯ.
- ಇದರ ನಂತರ ಗೂಗಲ್ ಡಾಕ್ಸ್‌ನಲ್ಲಿ ಇರಬಹುದಾದ ನಿಮ್ಮ ಕಂಟೆಂಟ್ ಅನ್ನು ನೋಡಲು, ರಚಿಸಲು ಮತ್ತು ಎಡಿಟ್ ಮಾಡಲು ಕೂಡ ಫೇಸ್‌ಬುಕ್ ಪರ್ಮಿಷನ್ ಕೇಳುತ್ತದೆ.
- ಹೀಗೆ ಮತ್ತೊಮ್ಮೆ ಅನುಮತಿ ಕೇಳಿದ ನಂತರ ಫೇಸ್‌ಬುಕ್, 'ಟ್ರಾನ್ಸ್‌ಫರ್ ಎ ಕಾಪಿ ಆಫ್ ಯುವರ್ ಇನ್‌ಫಾರ್ಮೇಷನ್' ಪುಟಕ್ಕೆ ನಿಮ್ಮನ್ನು ಮರಳಿ ಕರೆದೊಯ್ಯುತ್ತದೆ. ಇಲ್ಲಿ 'ಕನ್ಫರ್ಮ್ ಟ್ರಾನ್ಸ್‌ಫಾರ್' (Confirm Transfer) ಬಟನ್ ಒತ್ತಿದರೆ ಮಾಹಿತಿಯು ವರ್ಗಾವಣೆ ಆಗುತ್ತದೆ. ■

ನಿರಂತರ ಸದೃಢ ಆರೋಗ್ಯಕ್ಕಾಗಿ

SDM™ AYURVEDA PHARMACY

ಅಷ್ಟವರ್ಗಯುಕ್ತ
ಚ್ಯವನಪ್ರಾಶ
ಲೇಹ






ಹಸಿ ನೆಲ್ಲಿಕಾಯಿ ಯಿಂದಲೇ ತಯಾರಿಸಿದೆ.

- ರೋಗ ನಿರೋಧಕ ಶಕ್ತಿ ಹೆಚ್ಚಿಸಲು
- ವೃದ್ಧಾಪ್ಯದ ಆರೋಗ್ಯ ಸಮಸ್ಯೆ
- ಮಕ್ಕಳ ಬೆಳವಣಿಗೆ

SDM

ಆಯುಷ್ ಕ್ವಾಥ
ಮನೆಯಲ್ಲಿ ಇರಲೇಬೇಕಾದ ಆಯ್ದ ಮೂಲಿಕೆಗಳ ಕಷಾಯ

- ಶೀತ, ನೆಗಡಿ, ಗಂಟಲು ಹಾಗೂ ಕಫ ಬಾಧೆ.
- ಶರೀರದ ಚಯಾಪಚಯ ಪ್ರಕ್ರಿಯೆ ಸುಧಾರಣೆ.
- ಎಲ್ಲಾ ವಯಸ್ಸಿನವರಿಗೆ ಉಪಯುಕ್ತ.




ತಯಾರಕರು
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
SDM
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
ISO 9001:2015 & GMP CERTIFIED
Email: sdmaph@sdmayurvedacollegeudupi.in
Customer Care: +91 8970977513
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.